11. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಲ್ಲೂ ಸಂಘದ ಆಡಳಿತ ಕಛೇರಿಯು ತೆರೆದಿರುತ್ತದೆ.
12. ಆಡಳಿತ ಮಂಡಲಿಯ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳು ಹೊಂದಿರತಕ್ಕದ್ದು.
13. ಸದಸ್ಯರು ಮತ ಚಲಾಯಿಸಲು ಮತಗಟ್ಟೆಗೆ ಬರುವಾಗ ಕಡ್ಡಾಯವಾಗಿ ಸಂಘವು ವಿತರಿಸಿರುವ ಗುರುತಿನ ಚೀಟಿಯನ್ನು ಹಾಜರುಪಡಿಸತಕ್ಕದ್ದು.

ಸ್ಥಳ: ಬೆಂಗಳೂರು
ದಿನಾಂಕ: 21/1/2025

ಸಹಿ/–
(ಎಂ.ವಿ.ರಂಗಸ್ವಾಮಿ)
ಸಹಕಾರ ಅಭಿವೃದ್ಧಿಅಧಿಕಾರಿ ಹಾಗೂ
ರಿಟರ್ನಿಂಗ್‌ಅಧಿಕಾರಿ
ಶ್ರೀ ಕುಂಭೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ,
ಶ್ರೀ ಕುಂಭೇಶ್ವರ ಸಹಕಾರ ರಜತ ಭವನ
3&4ನೇ ಮುಖ್ಯರಸ್ತೆ, ರಾಮಯ್ಯ ಎನ್‌ಕ್ಲೇವ್,
ನಾಗಸಂದ್ರ ಅಂಚೆ, ಬೆಂಗಳೂರು–73

---

ತೆರೆದ ಅಂಚೆ

# ನಿರ್ದೇಶಕ ಮಂಡಳಿಯ ಚುನಾವಣಾ ಆಮಂತ್ರಣ ಪತ್ರ

ಶ್ರೀಮತಿ/ಶ್ರೀ ........................................................
........................................................
........................................................
........................................................

ಇವರಿಂದ :

**ಶ್ರೀ ಕುಂಭೇಶ್ವರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು.**

ಕೇಂದ್ರ ಕಛೇರಿ : ಕುಂಭೇಶ್ವರ ಸಹಕಾರ ರಜತ ಭವನ, ನಂ. 125 ಮತ್ತು 168, 2ನೇ ಅಡ್ಡರಸ್ತೆ, 3 ಮತ್ತು 4ನೇ ಮುಖ್ಯರಸ್ತೆ,
ಎಂ.ಎಸ್. ರಾಮಯ್ಯ ಎನ್‌ಕ್ಲೇವ್, 8ನೇ ಮೈಲಿ ಸರ್ಕಲ್ ಹತ್ತಿರ, ತುಮಕೂರು ರಸ್ತೆ, ಬೆಂಗಳೂರು–560 073.
ದೂರವಾಣಿ : ಕೇಂದ್ರ ಕಛೇರಿ : 080–28398551 ಶಾಖಾ ಕಛೇರಿ : 080– 26702167.



# ಶ್ರೀ ಕುಂಭೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು

ನೊಂದಣಿ ಸಂಖ್ಯೆ : ಸ.ನಿ.ಬೆಂ.1/ಬಿ/ನೊಂ.15043/1988–89 ತಾ|| 29–8–1988)
ಕೇಂದ್ರ ಕಛೇರಿ : ಕುಂಭೇಶ್ವರ ಸಹಕಾರ ರಜತ ಭವನ, ನಂ. 125 ಮತ್ತು 168, 2ನೇ ಅಡ್ಡರಸ್ತೆ, 3 ಮತ್ತು 4ನೇ ಮುಖ್ಯರಸ್ತೆ,
ಎಂ.ಎಸ್. ರಾಮಯ್ಯ ಎನ್‌ಕ್ಲೇವ್, 8ನೇ ಮೈಲಿ ಸರ್ಕಲ್ ಹತ್ತಿರ, ತುಮಕೂರು ರಸ್ತೆ, ಬೆಂಗಳೂರು–560 073.
email: kumbheshwara.1988@gmail.com.website:http://www.kumbheshwaracreditcoopsociety.com

## ನಿರ್ದೇಶಕ ಮಂಡಳಿಯ ಚುನಾವಣಾ ಆಮಂತ್ರಣ ಪತ್ರ

ಈ ಮೇಲ್ಕಂಡ ಶ್ರೀ ಕುಂಭೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ಚುನಾವಣಾ ದಿನಾಂಕದಿಂದ ಮುಂದಿನ 5 (ಐದು) ವರ್ಷಗಳ ಅವಧಿಗೆ ನಿರ್ದೇಶಕ ಮಂಡಳಿಯ ಚುನಾವಣೆಯನ್ನು ಚುನಾವಣಾಧಿಕಾರಿಗಳ ಆದೇಶದ ಮೇರೆಗೆ **ದಿನಾಂಕ: 09–02–2025 ನೇ ಭಾನುವಾರ** ಬೆಳಗ್ಗೆ 09–00 ರಿಂದ ಸಂಜೆ 4–00 ಗಂಟೆಯವರೆಗೆ ಚುನಾವಣೆ ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಅರ್ಹ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಚುನಾವಣೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ. ಚುನಾವಣಾ ವೇಳಾಪಟ್ಟಿಯನ್ನು ಕೆಳಗೆ ನಮೂದಿಸಲಾಗಿದೆ.

### ಚುನಾವಣಾ ನಡೆಯುವ ಸ್ಥಳ

**ಸೌಂದರ್ಯ ವಿದ್ಯಾಸಂಸ್ಥೆ**
ಸೌಂದರ್ಯ ರಸ್ತೆ, ಹಾವನೂರು ಬಡಾವಣೆ, ಹೆಸರಘಟ್ಟ ಮುಖ್ಯ ರಸ್ತೆ,
8ನೇ ಮೈಲಿ ಸರ್ಕಲ್ ಹತ್ತಿರ, ನಾಗಸಂದ್ರ ಪೋಸ್ಟ್, ಬೆಂಗಳೂರು–560073

### ವಿಶೇಷ ಸೂಚನೆ :

1. ಭಾವಚಿತ್ರವಿರುವ ಗುರುತಿನ ಚೀಟಿ ಪಡೆಯದೇ ಇರುವ ಸದಸ್ಯರು ದಿನಾಂಕ : 06–02–2025 ರೊಳಗಾಗಿ ಆಧಾರ್‌ಕಾರ್ಡ್ ಜೆರಾಕ್ಸ್ ಪ್ರತಿ ಹಾಗೂ ಮೂರು ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿ ತಪ್ಪದೇ ಪಡೆಯುವುದು.
2. ಸಹಕಾರ ಸಂಘಗಳ ಕಾಯ್ದೆ ಕಾನೂನು ಹಾಗೂ ಸಂಸ್ಥೆಯ ಬೈಲಾ ನಂ. 19(3) ರ ಪ್ರಕಾರ ಸದಸ್ಯರು ಹಿಂದಿನ ಐದು ವರ್ಷದ ಸರ್ವ ಸದಸ್ಯರ ಸಭೆಗಳ ಪೈಕಿ ಎರಡು ವರ್ಷ ಸದಸ್ಯರ ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಎರಡು ಸಹಕಾರ ವರ್ಷಗಳಲ್ಲಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಸಂಘ ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂತಹ ಸದಸ್ಯರು ನಿರ್ದೇಶಕ ಮಂಡಳಿಯ ಚುನಾವಣೆಯಲ್ಲಿ ಮತ ನೀಡುವ ಹಾಗೂ ಸ್ಪರ್ಧಿಸುವ ಹಕ್ಕನ್ನು ಹೊಂದಿರುವುದಿಲ್ಲ.

ನಿರ್ದೇಶಕ ಮಂಡಳಿಯ ಆದೇಶದ ಮೇರೆಗೆ

ದಿನಾಂಕ : 21–01–2025
ಸ್ಥಳ : ಬೆಂಗಳೂರು.

(ಎಸ್. ಸಿದ್ದಪ್ಪ ಪ್ರಸಾದ್)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

### –: ಚುನಾವಣಾ ಅಧಿಸೂಚನೆ :–

ನಮೂನೆ–12 ನಿಯಮ 14(3)

ರಿಟರ್ನಿಂಗ್ ಅಧಿಕಾರಿಗಳ ಕಛೇರಿ
ಶ್ರೀ ಕುಂಭೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ,
ಕುಂಭೇಶ್ವರ ರಜತ ಭವನ, ನಂ.125&168, 2ನೇ ಅಡ್ಡ ರಸ್ತೆ,
3&4ನೇ ಮುಖ್ಯರಸ್ತೆ, ಎಂ.ಎಸ್. ರಾಮಯ್ಯ ಎನ್‌ಕ್ಲೇವ್, ನಾಗಸಂದ್ರ ಅಂಚೆ, ಬೆಂಗಳೂರು–73

**ಚುನಾವಣಾ ನೋಟೀಸು**

ಶ್ರೀ ಕುಂಭೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ಕುಂಭೇಶ್ವರ ರಜತ ಭವನ, ನಂ.125&168, 2ನೇ ಅಡ್ಡ ರಸ್ತೆ, 3&4ನೇ ಮುಖ್ಯರಸ್ತೆ, ಎಂ.ಎಸ್. ರಾಮಯ್ಯ ಎನ್‌ಕ್ಲೇವ್, ನಾಗಸಂದ್ರ ಅಂಚೆ, ಬೆಂಗಳೂರು–73 ಈ ಸಹಕಾರ ಸಂಘದ ಆಡಳಿತ ಮಂಡಳಿಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಮಹಿಳಾ ಮೀಸಲು/ ಹಿಂದುಳಿದ ವರ್ಗ– ಪ್ರವರ್ಗ ಎ & ಬಿ (ಪಂಚಾಯತ್‌ರಾಜ್‌ಅಧಿನಿಯಮ) ಹಾಗೂ ಸಾಮಾನ್ಯ ವರ್ಗ ಈ ಮತಕ್ಷೇತ್ರಗಳಿಗೆ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ದಿನಾಂಕ:09–02–2025 ರಂದು ಭಾನುವಾರದಂದು ಬೆಳಿಗ್ಗೆ 09.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ **ಸೌಂದರ್ಯ ವಿದ್ಯಾಸಂಸ್ಥೆ, ಸೌಂದರ್ಯ ರಸ್ತೆ, ಹಾವನೂರು ಬಡಾವಣೆ, ಹೆಸರಘಟ್ಟ ಮೇನ್ ರೋಡ್, 8ನೇ ಮೈಲಿ ಸರ್ಕಲ್ ಹತ್ತಿರ, ನಾಗಸಂದ್ರ ಅಂಚೆ, ಬೆಂಗಳೂರು–560073** ಈ ಸ್ಥಳದಲ್ಲಿ ನಿಗದಿಪಡಿಸಿದ್ದು, ಚುನಾವಣೆಯನ್ನು ಜರುಗಿಸಲಾಗುವುದು. ಚುನಾವಣಾ ವೇಳಾಪಟ್ಟಿ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ/ವಾರ/ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 1 | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ ಮತ್ತು ವೇಳೆ | ದಿನಾಂಕ:27/01/2025 ಸೋಮವಾರ ಬೆಳಿಗ್ಗೆ 10.30 ರಿಂದ 3.00 ಗಂಟೆಯವರೆಗೆ (ಸಂಘದ ಕಛೇರಿಯಲ್ಲಿ) | 14(ಎ) | ಸಂಘದ ಕಛೇರಿಯ ಆವರಣದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗೆ |
| 2 | ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಲುಕೊನೆಯ ದಿನಾಂಕ ಮತ್ತು ವೇಳೆ | ದಿನಾಂಕ:1/02/2025 ಶನಿವಾರ ಬೆಳಿಗ್ಗೆ 10.30ರಿಂದ 3.00 ಗಂಟೆಯವರೆಗೆ (ಸಂಘದಕಛೇರಿಯಲ್ಲಿ) | 14(ಎ) | ಸಂಘದ ಕಛೇರಿಯ ಆವರಣದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗೆ |
| 3 | ನಾಮಪತ್ರಗಳ ಪರಿಶೀಲನೆ. | ದಿನಾಂಕ:02/02/2025 ಭಾನುವಾರ 11.00 ಗಂಟೆಯ ನಂತರ (ಸಂಘದಕಛೇರಿಯಲ್ಲಿ) | 14(ಬಿ) | ಸಂಘದ ಕಛೇರಿಯ ಆವರಣದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 4 | ಅರ್ಹ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ. | ದಿನಾಂಕ:02/02/2025 ಭಾನುವಾರನಾಮಪತ್ರಗಳ ಪರಿಶೀಲನೆ ನಂತರ (ಸಂಘದಕಛೇರಿಯಲ್ಲಿ) | 14ಬಿ(4) | ಸಂಘದ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 5 | ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ವೇಳೆ | ದಿನಾಂಕ:3/02/2025 ಸೋಮವಾರ ಮಧ್ಯಾಹ್ನ:03:00 ಗಂಟೆಯವರೆಗೆ (ಸಂಘದಕಛೇರಿಯಲ್ಲಿ) | 14(ಸಿ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ |
| 6 | ಉಮೇದುವಾರಿಕೆ ಅರ್ಜಿ ಮತ್ತು ನಾಮಪತ್ರಗಳನ್ನು ವಾಪಸ್ಸು ಪಡೆದವರ ಪಟ್ಟಿ ಪ್ರಕಟಣೆ | ದಿನಾಂಕ:3/02/2025 ಸೋಮವಾರ ಮಧ್ಯಾಹ್ನ:03:00 ಗಂಟೆಯ ನಂತರ (ಸಂಘದಕಛೇರಿಯಲ್ಲಿ) | 14(ಡಿ) | ಸಂಘದ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 7 | ಅಗತ್ಯವಾದಲ್ಲಿ ಉಮೇದುವಾರರಿಗೆ ಚುನಾವಣಾ ಚಿಹ್ನೆಗಳ ಹಂಚಿಕೆ | ದಿನಾಂಕ:3/02/2025 ಸೋಮವಾರ ಮಧ್ಯಾಹ್ನ:03:00 ಗಂಟೆಯ ನಂತರ (ಸಂಘದಕಛೇರಿಯಲ್ಲಿ) | 14(ಇ) | ಸಂಘದ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ |
| 8 | ಅರ್ಹಉಮೇದುವಾರರ ಪಟ್ಟಿಚಿಹ್ನೆಯೊಂದಿಗೆ ಪ್ರಕಟಣೆ | ದಿನಾಂಕ:05/01/2025 ಬುಧವಾರ ಮಧ್ಯಾಹ್ನ:03:00 | | ಸಂಘದ ಸೂಚನಾ ಫಲಕದಲ್ಲಿ |
| 9 | ಚುನಾವಣೆ ನಡೆಸಲು ಚುನಾವಣಾ ದಿನಾಂಕ ಮತ್ತು ವೇಳೆ | ದಿನಾಂಕ 09/02-2025 ಭಾನುವಾರ ಬೆಳಿಗ್ಗೆ 09:00 ಗಂಟೆಯಿಂದ ಸಾಯಂಕಾಲ 4:00 ಗಂಟೆಯವರೆಗೆ | – | ಸ್ಥಳ : ಸೌಂದರ್ಯ ವಿದ್ಯಾಸಂಸ್ಥೆ ಸೌಂದರ್ಯ ರಸ್ತೆ, ಹಾವನೂರು ಬಡಾವಣೆ,ಹೆಸರಘಟ್ಟ ಮೈನ್ ರೋಡ್, ನಾಗಸಂದ್ರ ಅಂಚೆ, ಬೆಂಗಳೂರು-560073 |
| 10 | ಮತ ಎಣಿಕೆಯ ದಿನ ಮತ್ತು ದಿನಾಂಕ ಮತ್ತು ವೇಳೆ | ದಿನಾಂಕ : 09/02/2025 ಭಾನುವಾರ ಮತದಾನದ ನಂತರ | – | |
| 11. | ಚುನಾವನಾ ಅಧಿಕಾರಿಗಳಿಂದ ಫಲಿತಾಂಶ ಪ್ರಕಟಣೆ | ಮತ ಎಣಿಕೆಯ ನಂತರ | – | ರಿಟರ್ನಿಂಗ್ ಅಧಿಕಾರಿಗಳಿಂದ |

## ಸೂಚನೆಗಳು

1. ಸಂಘದ ಉಪನಿಯಮದ ಬೈಲಾ ಸಂಖ್ಯೆ-47(1) ಪ್ರಕಾರ ಕಾರ್ಯಕಾರಿ ಮಂಡಳಿಗೆ ಒಟ್ಟು ಹದಿಮೂರು(13) ನಿರ್ದೇಶಕರನ್ನು ಮಾತ್ರ ಚುನಾಯಿಸಬೇಕಾಗಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 28-ಎ(3) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ ನಿಯಮ 14-ಎಎಲ್ಎ ರನ್ವಯ ಈ ಕೆಳಗಿನಂತೆ ಸ್ಥಾನಗಳನ್ನು ಮೀಸಲಿಡಲಾಗಿದೆ.
   - ಅ) ಸಾಮಾನ್ಯ 07(ಏಳು) ಸ್ಥಾನಗಳಾಗಿರುತ್ತವೆ.
   - ಆ) ಪರಿಶಿಷ್ಟ ಜಾತಿ ವರ್ಗಕ್ಕೆ 1 (ಒಂದು) ಸ್ಥಾನ
   - ಇ) ಪರಿಶಿಷ್ಟ ಪಂಗಡಕ್ಕೆ 1 (ಒಂದು) ಸ್ಥಾನ
   - ಈ) ಮಹಿಳಾ ಮೀಸಲಾತಿ 02 (ಎರಡು) ಸ್ಥಾನ
   - ಉ) ಹಿಂದುಳಿದ ವರ್ಗದ ಪ್ರವರ್ಗ ಎ – 01(ಒಂದು) ಸ್ಥಾನ
   - ಊ) ಹಿಂದುಳಿದ ವರ್ಗದ ಪ್ರವರ್ಗ ಪ್ರವರ್ಗ ಬಿ– 01(ಒಂದು) ಸ್ಥಾನ
2. ಚುನಾವಣೆಗೆ ಸ್ಪರ್ಧಿಸಲು ಇಚ್ಚಿಸುವ ಸದಸ್ಯರು ಉಮೇದುವಾರಿಕೆ ಅಥವಾ ನಾಮಪತ್ರಗಳನ್ನು ಸಂಘದ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
3. ಉಮೇದುವಾರರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ನಾಮಪತ್ರ ಸಲ್ಲಿಸಲು ಅವಕಾಶವಿರುತ್ತದೆ. ಎರಡು ಮತಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಸಲು ಅವಕಾಶವಿರುವುದಿಲ್ಲ.
4. ನಾಮಪತ್ರಗಳನ್ನು ಹಾಗೂ ಅವುಗಳನ್ನು ವಾಪಸ್ಸು ಪಡೆಯುವ ಅರ್ಜಿಗಳನ್ನು ಖುದ್ದಾಗಿ ಸಲ್ಲಿಸತಕ್ಕದ್ದು, ಉಮೇದುವಾರರು ನಾಮಪತ್ರಗಳಲ್ಲಿ ತಾವು ಯಾವ ಸ್ಥಾನಕ್ಕೆ ಸ್ಪರ್ಧಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಸ್ಥಾನಗಳಿಗೆ ಸ್ಪರ್ಧಿಸುವ ಉಮೇದುವಾರರು ನಾಮಪತ್ರಗಳೊಂದಿಗೆ ಆ ವರ್ಗಕ್ಕೆ ಸೇರಿದವರೆಂಬ ರುಜುವಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ಚುನಾವಣೆಗಾಗಿ ನೀಡಲ್ಪಟ್ಟ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸದಿದ್ದರೆ ಅಂತಹ ನಾಮಪತ್ರಗಳು ತಿರಸ್ಕೃತಗೊಳ್ಳುವುದು.
5. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ರ ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಇಚ್ಛೆಯುಳ್ಳ ಉಮೇದುವಾರರು ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹತೆ ಹೊಂದಿರುವ ಒಬ್ಬ ಸದಸ್ಯರ ಸೂಚನೆಯೊಂದಿಗೆ ನಾಮಪತ್ರಗಳನ್ನು ಸಲ್ಲಿಸಬೇಕು. ಅನರ್ಹ ಸದಸ್ಯರ ಸಹಿಯೊಂದಿಗೆ ಸೂಚಿಸಿದ ನಾಮಪತ್ರಗಳನ್ನು ತಿರಸ್ಕೃತಗೊಳ್ಳುವುದು.
6. ಒಬ್ಬ ಸದಸ್ಯ ಒಂದು ವರ್ಗದ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸುವಂತಿಲ್ಲ.
7. ನಿಯಮ 14(ಎ) ಪ್ರಕಾರ ಚುನಾವಣೆಗೆ ಸ್ಪರ್ಧಿಸಲು ಪ್ರತಿಯೊಬ್ಬ ಅಭ್ಯರ್ಥಿಯು ರೂ.2,000.00 (ಎರಡು ಸಾವಿರ) ಗಳನ್ನು ಚುನಾವಣಾ ಠೇವಣಿಯಾಗಿ ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಸಂಘದ ಹೆಸರಿನಲ್ಲಿ ಸಲ್ಲಿಸತಕ್ಕದ್ದು. ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ, ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಠೇವಣಿಯು ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ 50% ಅಂದರೆ ರೂ. 1,000-00 (ಒಂದು ಸಾವಿರ) ಇರತಕ್ಕದ್ದು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮಪತ್ರಗಳು ತಿರಸ್ಕೃತಗೊಳ್ಳುವುದು.
8. ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳ 1/6 ರಷ್ಟು ಮತಗಳನ್ನು ಪಡೆಯದ ಸಾಮಾನ್ಯ ಅಭ್ಯರ್ಥಿಗಳ ಹಾಗೂ 1/10 ರಷ್ಟು ಮತಗಳನ್ನು ಪಡೆಯದ ಮೀಸಲು ಅಭ್ಯರ್ಥಿಗಳ ಚುನಾವಣಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ನಾಮಪತ್ರಗಳ ಪರಿಶೀಲನೆ ವೇಳೆ ಉಮೇದುವಾರರು ಅಥವಾ ಅವರ ಸೂಚಕರು ಹಾಜರಿರಬಹುದು.
10. 1960 ರ ಸಹಕಾರ ಸಂಘಗಳ ನಿಯಮ 14(ಇ) ಪ್ರಕಾರ ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳತಕ್ಕದ್ದು. "ಮಾನ್ಯ ಮಾಡಿದ ರಾಜಕೀಯ ಪಕ್ಷ" ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಹಾಗೂ ಹಂಚಿಕೆ) ಆದೇಶ 1968 ರಡಿ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷ.